KACD420015042020

HANUMANTHARAYAPPA B R
Digitally signed by HANUMANTHARAYAPPA B R
Date: 2026.07.18 12:59:00 +0530

Presented on : 15-10-2020
Registered on : 15-10-2020
Decided on : 16-07-2026
Duration : 5 years, 9 months, 1 days

# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಹೊಳಲ್ಕೆರೆ.

ಃ ಉಪಸ್ಥಿತರು ಃ

ಶ್ರೀ.ಹನುಮಂತರಾಯಪ್ಪ.ಬಿ.ಆರ್., ಬಿಎ.ಎಲ್.ಎಲ್.ಬಿ.,
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಯವರು, ಹೊಳಲ್ಕೆರೆ
ದಿನಾಂಕ **16** ನೇ ಜುಲೈ ಮಾಹೆ **2026** ನೇ ಇಸವಿ

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ **1043/2020**

| | |
|---|---|
| ಪಿರ್ಯಾದುದಾರರು ಃ | ಹೊಳಲ್ಕೆರೆ ಪೊಲೀಸ್ ಠಾಣೆ,<br>(ಪರವಾಗಿ ಃ- ಸ.ಸ.ಅ.) |
| ಃ ವಿರುದ್ಧ ಃ | |
| ಆರೋಪಿ | **2.** ಸಾಕಮ್ಮ ಕೋಂ ಚಂದ್ರಪ್ಪ<br>**40** ವರ್ಷ,<br>ಚಿಲ್ಲರೆ ಅಂಗಡಿ ವ್ಯಾಪಾರಿ, ಗಂಗಸಮುದ್ರ ಗ್ರಾಮ<br>ಹೊಳಲ್ಕೆರೆ ತಾಲ್ಲೂಕು. |
| (ಆರೋಪಿ ಪರ ಶ್ರೀ. ಬಿ.ಎನ್.ಪಿ., ವಕೀಲರು ಹಾಜರಾಗಿರುತ್ತಾರೆ) | |

| | |
|---|---|
| ಅಪರಾಧ ಮಾಡಿದ ದಿನಾಂಕ | **08/11/2012** |
| ಅಪರಾಧ ವರದಿ ಮಾಡಿದ ದಿನಾಂಕ | **08/11/2012** |
| ಆರೋಪಿತ | ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. |
| ವಿಚಾರಣೆ ಪ್ರಾರಂಭಿಸಿದ ದಿನಾಂಕ | **18/05/2019** |
| ವಿಚಾರಣೆ ಮುಕ್ತಾಯವಾದ ದಿನಾಂಕ | **14/08/2024** |
| ಆರೋಪಿಸಲ್ಪಟ್ಟ ಅಪರಾಧಗಳು | ಕಲಂ.**32** ಮತ್ತು **34** ಕೆ.ಇ.ಕಾಯಿದೆ |
| ತೀರ್ಪು ಘೋಷಣೆಯ ದಿನಾಂಕ | **16/07/26** |
| ನ್ಯಾಯಾಧೀಶರ ಅಭಿಪ್ರಾಯ | ದೋಷಮುಕ್ತಗೊಳಿಸಲಾಗಿದೆ |

(ಹನುಮಂತರಾಯಪ್ಪ.ಬಿ.ಆರ್)
ಅಪರ ಸಿವಿಲ್ ನ್ಯಾಯಾಧೀಶರು
ಪ್ರ.ದ.ನ್ಯಾ.ದಂಡಾಧಿಕಾರಿರವರು, ಹೊಳಲ್ಕೆರೆ

## ಃಃ ತೀರ್ಪು ಃಃ

ಹೊಳಲ್ಕೆರೆ ಪೋಲೀಸ್ ಠಾಣೆ ರವರು 1 ಮತ್ತು 2 ನೇ ಆರೋಪಿತರ ವಿರುದ್ಧ ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965 ರ ಕಲಂ. 32 ಮತ್ತು 34 ರ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ. ಆದರೆ 1 ನೇ ಆರೋಪಿಯು ಪ್ರಕರಣಕ್ಕೆ ಹೆಚ್ಚು ದಿನಗಳ ಕಾಲ ಹಾಜರಾಗದೇ ತಪ್ಪಿಸಿಕೊಂಡಿರುವ ಕಾರಣ ದಿನಾಂಕ 02/03/2026 ರ ಆದೇಶದಂತೆ ಸದರಿ ಆರೋಪಿತನನ್ನು ಈ ಪ್ರಕರಣದಿಂದ ಕೈ ಬಿಟ್ಟು ಪ್ರತ್ಯೇಕ ಪ್ರಕರಣ ಸಂಖ್ಯೆ 90/2026 ರಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿರುತ್ತದೆ.

ಅಭಿಯೋಜನೆ ಪ್ರಕರಣದ ಸಾರಾಂಶ ಏನೆಂದರೆ ಃ-

**2.** ದಿನಾಂಕ 08/11/2012 ರಂದು ಸಂಜೆ 5-30 ಗಂಟೆಗೆ ಹೊಳಲ್ಕೆರೆ ತಾಲ್ಲೂಕು ಎನ್.ಜಿ.ಹಳ್ಳಿ ಗೇಟ್ ನಲ್ಲಿ ಆರೋಪಿತರು 180 ಎಂ.ಎಲ್.ನ 39 ಓಲ್ಡ್ ಟವರಿನ್ ವಿಸ್ಕಿ ಪ್ರುಷರ್ ಪೇಪರ್ ಪೌಚುಗಳುನ್ನು ಸರ್ಕಾರದ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ

ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ಮಾರಾಟ ಮಾಡುತ್ತಿದ್ದಾರೆಂದು ದೋ ಸಾಕ್ಷಿ-1 ರವರು ದೋ.ಸಾಕ್ಷಿ-2 ಮತ್ತು 3 ರವರ ಸಮಕ್ಷಮ ಮತ್ತು ದೋ.ಸಾಕ್ಷಿ-6 ಮತ್ತು 7 ರವರ ಸಹಾಯದಿಂದ ದಾಳಿ ಮಾಡಿ ಮೇಲ್ಕಂಡ ಮದ್ಯದ ಪೌಚುಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ ತನಿಖೆಯಿಂದ ಕಂಡುಬಂದಿರುತ್ತದೆ ಎಂದು ಆರೋಪಿತರ ವಿರುದ್ಧ ಕಲಂ.32 ಮತ್ತು 34 ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ.

**3.** ಈ ನ್ಯಾಯಾಲಯವು ಆರೋಪ ಪಟ್ಟಿಯಲ್ಲಿನ ಆರೋಪವನ್ನು ಆಧರಿಸಿ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರಿಗೆ ಈ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಿದ್ದು, ಆರೋಪಿತರು ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿತರಿಗೆ ದೋಷಾರೋಪಣೆ ಪಟ್ಟಿಯ ದಾಖಲೆಗಳನ್ನು ಸಿ.ಆರ್.ಪಿ.ಸಿ ಕಲಂ.207 ರ ಅಡಿಯಲ್ಲಿ ಒದಗಿಸಲಾಯಿತು. ಆರೋಪಿತರಿಗೆ ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965 ರ ಕಲಂ.32 ಮತ್ತು 34 ಅಡಿಯಲ್ಲಿನ ಅಪರಾಧಗಳ ಬಗ್ಗೆ ಆಪಾದನೆಯ ಸಾರಾಂಶಗಳನ್ನು ಓದಿ ಹೇಳಿದ್ದು ಆರೋಪಿತರು ಆರೋಪದ ಎಲ್ಲಾ ಅಂಶಗಳನ್ನು ನಿರಾಕರಿಸಿದ್ದು ವಿಚಾರಣೆಯನ್ನು ಬಯಸಿರುತ್ತಾರೆ. ಸಾಕ್ಷ್ಯ ವಿಚಾರಣಾ ಹಂತದಲ್ಲಿ 1 ನೇ ಆರೋಪಿ ಹೆಚ್ಚು ಕಾಲ ಗೈರು ಹಾಜರಾಗಿದ್ದು 1 ನೇ ಆರೋಪಿತನನ್ನು ಈ ಪ್ರಕರಣದಿಂದ ಬೇರ್ಪಡಿಸಿ ಆತನ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿರುತ್ತದೆ.

**4.** ಅಭಿಯೋಜನೆಯು 2 ನೇ ಆರೋಪಿತಳ ಮೇಲೆ ಆರೋಪಿಸಿರುವ ಆರೋಪವನ್ನು ಸಾಬೀತುಪಡಿಸುವ ಸಲುವಾಗಿ ಅಭಿಯೋಜನೆಯವರು ಸಾಕ್ಷ್ಯ ವಿಚಾರಣೆಯನ್ನು ಆರಂಭಿಸಿದ್ದು, ಒಟ್ಟು 11 ಸಾಕ್ಷಿದಾರರ ಪೈಕಿ 7 ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದ್ದು, ಚಾಸಾ.1, 2, 3, 6, 7 5, 4 ರವರನ್ನು ಪ್ರಾಸಾ.1 ರಿಂದ ಪ್ರಾಸಾ.7 ರಂತೆ ಸಾಕ್ಷಿದಾರರ ಹೇಳಿಕೆಗಳನ್ನು ನೀಡಿದ್ದು, ನಿಪಿ.1 ರಿಂದ ನಿಪಿ.6 ರಂತೆ ಅಭಿಯೋಜನೆಯ ದಾಖಲೆಗಳನ್ನು ಗುರುತಿಸಿಕೊಂಡಿದ್ದು, ಅದೇರೀತಿ 180 ಎಂ.ಎಲ್.ನ 39 ಓಲ್ಡ್ ಟವರಿನ್ ವಿಸ್ಕಿ ಪ್ರಷರ್

ಪೇಪರ್ ಪೌಚುಗಳುನ್ನು ಹಾಗೂ ಒಂದು ರಟ್ಟಿನ ಬಾಕ್ಸ್ ನ್ನು ಮು.ಮಾ.1 ಮತ್ತು ಮು.ಮಾ.2 ಎಂದು ಗುರುತಿಸಿಕೊಳ್ಳಲಾಗಿರುತ್ತದೆ. ಅಭಿಯೋಜನೆಯ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಿದ ನಂತರ 2 ನೇ ಆರೋಪಿತಳಿಗೆ ಸಿ.ಆರ್.ಪಿ.ಸಿ ಕಲಂ.313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ತನ್ನ ವಿರುದ್ಧವಾಗಿ ಸಾಕ್ಷಿದಾರರು ಹೇಳಿರುವ ಎಲ್ಲಾ ಹೇಳಿಕೆಯ ಅಂಶಗಳನ್ನು ನಿರಾಕರಿಸಿರುತ್ತಾರೆ, ಅದೇರೀತಿ ಸಿ.ಆರ್.ಪಿ.ಸಿ ಕಲಂ.437-ಎ ಅಡಿಯಲ್ಲಿ 2 ನೇ ಆರೋಪಿತಳಿಂದ ಜಾಮೀನು ಪಡೆಯಲಾಗಿರುತ್ತದೆ.

**5.** ಅಭಿಯೋಜನೆಯ ಸರ್ಕಾರಿ ವಕೀಲರ ಮತ್ತು 2 ನೇ ಆರೋಪಿತಳ ಪರ ವಕೀಲರ ವಾದ ವಿವಾದವನ್ನು ಕೇಳಲಾಯಿತು ಹಾಗೂ ಕಡತದಲ್ಲಿರುವ ಎಲ್ಲಾ ಸಾಕ್ಷ್ಯದಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುತ್ತದೆ.

**6.** ಈ ಪ್ರಕರಣದಲ್ಲಿ ಉದ್ಭವಿಸುವ ವಿವಾದಾಂಶವೇನೆಂದರೆ ಃ

1**)** ದಿನಾಂಕ 08/11/2019 ರಂದು ಸಂಜೆ 5-30 ಗಂಟೆ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಎನ್.ಜಿ.ಹಳ್ಳಿ ಗೇಟ್ ಬಳಿ 1 ಮತ್ತು 2 ನೇ ಆರೋಪಿತರು 180 ಎಂ.ಎಲ್.ನ 39 ಓಲ್ಡ ಟವರಿನ್ ವಿಸ್ಕಿಯ ಪೌಚುಗಳನ್ನು ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಹೊಂದಿರುತ್ತಾರೆಂದು ಕರ್ನಾಟಕ ಅಬಕಾರಿ ಕಾಯ್ದೆ ಉಲ್ಲಂಘಿಸಿದ್ದು, ಆ ಮೂಲಕ ಕಲಂ.32 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ**?**

**2)** ಮೇಲೆ ಹೇಳಲಾದ ದಿನಾಂಕ**,** ಸಮಯ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರು ಆರೋಪಿತರು 180 ಎಂ.ಎಲ್.ನ 39 ಓಲ್ಡ ಟವರಿನ್ ವಿಸ್ಕಿ ಪೌಚುಗಳನ್ನು ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಹೊಂದಿ ಹೆಚ್ಚಿನ ಲಾಭಗಳಿಸಲು ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ವಶದಲ್ಲಿಟ್ಟುಕೊಂಡಿರುತ್ತಾರೆ. ಆ ಪ್ರಕಾರ 1 ಮತ್ತು 2 ನೇ ಆರೋಪಿತರು ಕಲಂ.34 ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ**?**

3) ಯಾವ ಆದೇಶ?

7. ಮೇಲ್ಕಂಡ ವಿವಾದಾಂಶಕ್ಕೆ ಈ ಕೆಳಕಂಡ ಕಾರಣಗಳಿಗಾಗಿ ಉತ್ತರಿಸುತ್ತೇನೆ.

ಅಂಶ 1 ಃ ನಕಾರಾತ್ಮಕವಾಗಿ

ಅಂಶ 2 ಃ ನಕಾರಾತ್ಮಕವಾಗಿ

ಅಂಶ 3 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ ಃ

## ಕಾರಣಗಳು

**8.** ಅಂಶ 1 ಮತ್ತು 2 ಃ- ಅಭಿಯೋಜನೆಯ ಪ್ರಕಾರ ದಿನಾಂಕ 08/11/2012 ರಂದು ಸಂಜೆ 5-30 ಗಂಟೆಗೆ ಹೊಳಲ್ಕೆರೆ ತಾಲ್ಲೂಕು ಎನ್.ಜಿ.ಹಳ್ಳಿ ಗೇಟ್ ನಲ್ಲಿ ಆರೋಪಿತರು 180 ಎಂ.ಎಲ್.ನ 39 ಓಲ್ಡ್ ಟವರಿನ್ ವಿಸ್ಕಿ ಪ್ರುಷರ್ ಪೇಪರ್ ಪೌಚುಗಳುನ್ನು ಸರ್ಕಾರದ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ಮಾರಾಟ ಮಾಡುತ್ತಿದ್ದಾರೆಂದು ದೋ ಸಾಕ್ಷಿ-1 ರವರು ದೋ.ಸಾಕ್ಷಿ-2 ಮತ್ತು 3 ರವರ ಸಮಕ್ಷಮ ಮತ್ತು ದೋ.ಸಾಕ್ಷಿ-6 ಮತ್ತು 7 ರವರ ಸಹಾಯದಿಂದ ದಾಳಿ ಮಾಡಿ ಮೇಲ್ಕಂಡ ಮದ್ಯದ ಪೌಚುಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ ತನಿಖೆಯಿಂದ ಕಂಡುಬಂದಿರುತ್ತದೆ ಎಂದು ಆರೋಪಿತರ ವಿರುದ್ದ ಕಲಂ.32 ಮತ್ತು 34 ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ.

9. ಅಭಿಯೋಜನೆಯು 2 ನೇ ಆರೋಪಿತಳ ಮೇಲೆ ಆರೋಪಿಸಿರುವ ಆರೋಪವನ್ನು ಸಾಭೀತುಪಡಿಸುವ ಸಲುವಾಗಿ ಅಭಿಯೋಜನೆಯವರು ಸಾಕ್ಷ್ಯ ವಿಚಾರಣೆಯನ್ನು ಆರಂಭಿಸಿದ್ದು, ಒಟ್ಟು 11 ಸಾಕ್ಷಿದಾರರ ಪೈಕಿ 7 ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದ್ದು, ಚಾಸಾ.1, 2, 3, 6, 7 5, 4 ರವರನ್ನು ಪ್ರಾಸಾ.1 ರಿಂದ ಪ್ರಾಸಾ.7 ರಂತೆ ಸಾಕ್ಷಿದಾರರ ಹೇಳಿಕೆಗಳನ್ನು ನೀಡಿದ್ದು, ನಿಪಿ.1 ರಿಂದ ನಿಪಿ.6 ರಂತೆ ಅಭಿಯೋಜನೆಯ ದಾಖಲೆಗಳನ್ನು ಗುರುತಿಸಿಕೊಂಡಿದ್ದು, ಅದೇರೀತಿ 180 ಎಂ.ಎಲ್.ನ 39 ಓಲ್ಡ್ ಟವರಿನ್ ವಿಸ್ಕಿ ಪ್ರುಷರ್ ಪೇಪರ್ ಪೌಚುಗಳುನ್ನು ಹಾಗೂ ಒಂದು ರಟ್ಟಿನ ಬಾಕ್ಸ್ ನ್ನು ಮು.ಮಾ.1 ಮತ್ತು ಮು.ಮಾ.2 ಎಂದು ಗುರುತಿಸಿಕೊಳ್ಳಲಾಗಿರುತ್ತದೆ.

10. ಅಭಿಯೋಜನೆಯು ವಿಚಾರಣೆ ಆರಂಭಿಸಿದ್ದು, ಚಾಸಾ.1 ಗಿರೀಶ.ಪಿ, ರವರು

ಪಿರ್ಯಾಧಿ/ ಪೊಲೀಸ್ ಅಧಿಕಾರಿಯಾಗಿದ್ದು, ದಾಳಿ ವೇಳೆ ಭಾಗವಹಿಸಿರುವ ಬಗ್ಗೆ ಪ್ರಾಸಾ.1 ಎಂಬುದಾಗಿ ತಮ್ಮ ಮೌಖಿಕ ಸಾಕ್ಷ್ಯವನ್ನು ನೀಡಿದ್ದು ಮುಖ್ಯ ವಿಚಾರಣೆಯಲ್ಲಿ, ದಿಃ 08-11-2012 ರಂದು ಸಂಜೆ 4 ಮುಕ್ಕಾಲು ಗಂಟೆಗೆ ನಾನು ಠಾಣೆಯಲ್ಲಿರುವಾಗ ಎನ್.ಜಿ.ಹಳ್ಳಿ ಗೇಟ್ ಬಳಿ ಯಾರೋ ಇಬ್ಬರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಅಂತ ಬಾತ್ಮಿ ಬಂದ ಮೇರೆಗೆ ಠಾಣೆಗೆ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಸದರಿಯವರಿಗೆ ಮಾಹಿತಿ ತಿಳಿಸಿ ಚಾಸಾ-2 ಮತ್ತು 3 ಸಿಬ್ಬಂದಿಗಳಾದ ಚಾಸಾ-6 ಹಾಗೂ ಇತರೆವರನ್ನು ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋಗಿರುತ್ತೇನೆ. ಅದೇ ದಿನ 5-30 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಜೀಪನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ನಾವೆಲ್ಲರೂ ನಡೆದುಕೊಂಡು ಹೋಗುತ್ತಿದ್ದಾಗ ಒಬ್ಬ ಹೆಂಗಸು ಮತ್ತು ಒಬ್ಬ ಗಂಡಸು ರಟ್ಟಿನ ಬಾಕ್ಸನಲ್ಲಿ ಮದ್ಯವನ್ನು ಮಾರಾಟ ಮಾಡುತ್ತಿರುವುದು ಕಂಡು ಬಂತು ನಾವು ಹತ್ತಿರ ಹೋದಾಗ ಅವರು ಓಡಿ ಹೋದರು, ಸ್ಥಳದಲ್ಲಿ ಬಿಟ್ಟು ಹೋದ ಮದ್ಯವನ್ನು ಹಾಗೂ ರಟ್ಟಿನ ಬಾಕ್ಸವನ್ನು ಪರಿಶೀಲಿಸಿಲಾಗಿ 180 ಎಂ ಎಲ್ ನ ಓಟಿ ಪೌಚಗಳು ಇರುವುದು ಕಂಡು ಬಂತು, ಓಡಿದವರ ಬಗ್ಗೆ ಸ್ಥಳದಲ್ಲಿ ಚಾಸಾ-4 ಮತ್ತು 5 ರವರನ್ನು ಕೇಳಲಾಗಿ ರಾಮಾಂಜನೇಯ ಮತ್ತು ಸಾಕಮ್ಮ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದರು ಅಂತ ತಿಳಿಸಿದರು. ಪರವಾನಿಗೆ ಇಲ್ಲ ಅಂತ ತಿಳಿಸಿದರು, ಸಂಜೆ 6 ಗಂಟೆಯಿಂದ 7 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ1 ಸಹಿಯನ್ನು ನಿಪಿಃ1 ಎ ಅಂತ ಗುರುತಿಸಲಾಗಿರುತ್ತದೆ ಠಾಣೆಗೆ ದೂರನ್ನು ಹಾಗೂ ಮಾಲನ್ನು ನೀಡಿರುತ್ತೇವೆಂದು ಹೇಳಿಕೆ ನೀಡಿ ದೂರನ್ನು ನೋಡಿ ಗುರುತಿಸಿದ್ದು ನಿಪಿಃ2 ಸಹಿಯನ್ನು ನಿಪಿಃ2 ಎ ಅಂತ ಗುರುತಿಸಲಾಗಿರುತ್ತದೆ, ನ್ಯಾಯಾಲಯದ ಮುಂದೆ ಇರುವ ಮು.ಮ.ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಎಂ ಓ-1 ಮತ್ತು 2 ಅಂತ ಗುರುತಿಸಲಾಗಿರುತ್ತದೆ. ಆ ದಿನ ಓಡಿ ಹೋದವರ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆಂದು ನ್ಯಾಯಾಲಯದ ಮುಂದೆ ಇರುವ 2ನೇ ಅರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

11. ಅಭಿಯೋಜನೆಯು ಚಾಸಾ.2 ಅಂಜಿನಪ್ಪ ರವರು ಸ್ಥಳ ಪಂಚನಾಮೆಯ

ಸಾಕ್ಷಿದಾರರಾಗಿದ್ದು, ಸದರಿಯವರನ್ನು ಪ್ರಾಸಾ-2 ಎಂದು ವಿಚಾರಣೆಗೊಳಪಡಿಸಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಆರೋಪಿತರು ಯಾರು ಎಂಬುದು ನನಗೆ ಗೊತ್ತಿಲ್ಲ. ಚಾಸಾ–3 ರಿಂದ 5 ಸಹಾ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಯಾವ ವಿಚಾರ ಸಹಾ ನನಗೆ ಗೊತ್ತಿಲ್ಲ. ಈ ಸಂಬಂಧ ನಾನು ತನಿಖಾಧಿಕಾರಿಗಳಿಗೆ ನನ್ನ ಹೇಳಿಕೆ ನೀಡಿಲ್ಲ. ಸಾಕ್ಷಿಗೆ ನಿಪಿ–**1** ನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು. ನಿಪಿ–1 ಕ್ಕೆ ನಾನು ಹೊಳಲ್ಕೆರೆಯ ಬಸ್ ನಿಲ್ದಾಣದ ಬಳಿ ಸಹಿ ಮಾಡಿರುತ್ತೇನೆ. ನಿಪಿ–1 ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ ಅದರ ವಿಚಾರಗಳನ್ನು ನನಗೆ ಓದಿ ಹೇಳಿಲ್ಲ. ನಿಪಿ–1 ಕ್ಕೆ ನನ್ನ ಜೊತೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂಬುದು ಸಹಾ ನನಗೆ ಗೊತ್ತಿಲ್ಲ. ಕೆಲಸದ ನಿಮ್ಮಿತ್ತ ನಾನು ಬಸ್ ನಿಲ್ದಾಣದ ಬಳಿ ನಿಂತಿದ್ದಾಗ ಪೊಲೀಸರು ಕೆಲವು ದಾಖಲೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ಮಧ್ಯದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈ ಸಂಬಂಧ ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

12. ಅಭಿಯೋಜನೆಯು ಚಾಸಾ.3 ಬಿ.ಮಹಂತೇಶ್ ರವರು ಸ್ಥಳ ಪಂಚನಾಮೆಯ ಸಾಕ್ಷಿದಾರರಾಗಿದ್ದು, ಸದರಿಯವರನ್ನು ಪ್ರಾಸಾ-3 ಎಂದು ವಿಚಾರಣೆಗೊಳಪಡಿಸಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ಯಾವ ವಿಚಾರ ಸಹಾ ನನಗೆ ಗೊತ್ತಿಲ್ಲ. ಈ ಸಂಬಂಧ ನಾನು ತನಿಖಾಧಿಕಾರಿಗಳಿಗೆ ನನ್ನ ಹೇಳಿಕೆ ನೀಡಿಲ್ಲ, ಸಾಕ್ಷಿಗೆ ನಿಪಿ–1 ನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ1(ಸಿ) ಎಂದು ಗುರುತಿಸಲಾಯಿತು. ಸುಮಾರು 3–4 ವರ್ಷಗಳ ಹಿಂದೆ ನಿಪಿ–1 ಕ್ಕೆ ತಾನು ಎನ್ ಜಿ ಹಳ್ಳಿ ಬಸ್ ನಿಲ್ದಾಣದ ಬಳಿ ಸಹಿ ಮಾಡಿರುತ್ತೇನೆ, ನಿಪಿ–1 ರಲ್ಲಿ ಏನು ಬರೆದಿದೆ ಎಂಬುದು ತನಗೆ ಗೊತ್ತಿಲ್ಲ ಪೋಲಿಸರು ಅದರ ವಿಚಾರಗಳನ್ನು ತನಗೆ ಓದಿ ಹೇಳಿಲ್ಲ ನಿಪಿ–1 ಕ್ಕೆ ಸಹಿ

ಮಾಡುವಾಗ ಸಮಯ ಎಷ್ಟಾಗಿತ್ತೆಂದು ತನಗೆ ನೆನಪಿಲ್ಲ, ನಿಪಿ–1 ಕ್ಕೆ ತನ್ನ ಜೊತೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂಬುದು ಸಹಾ ತನಗೆ ಗೊತ್ತಿಲ್ಲ, ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಪೋಲಿಸರು ನನ್ನ ಸಮಕ್ಷಮ ಯಾವುದೇ ಮದ್ಯದ ಪೌಚುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ, ಈ ಸಂಬಂಧ ತಾನು ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

13. ಚಾಸಾ.**4** ರವರಾದ ಲೋಕೇಶ್ ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಆ ಬಗ್ಗೆ ಪ್ರಾಸಾ-7 ಎಂಬುದಾಗಿ ಮೌಖಿಕ ಸಾಕ್ಷ್ಯ ನೀಡಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ವಿಚಾರಗಳಾವುವು ತನಗೆ ಗೊತ್ತಿಲ್ಲ, ಪೋಲಿಸರು ತನ್ನನ್ನುವಿಚಾರಿಸಿಲ್ಲ ತಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಪೋಲಿಸರು ತನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ಪಂಚನಾಮೆ ಕ್ರಮವನ್ನು ಜರುಗಿಸಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

14. ಚಾಸಾ.-5 ರವರಾದ ರಮೇಶ್ ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಆ ಬಗ್ಗೆ ಪ್ರಾಸಾ-6 ಎಂಬುದಾಗಿ ಮೌಖಿಕ ಸಾಕ್ಷ್ಯ ನೀಡಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ವಿಚಾರಗಳಾವುವು ತನಗೆ ಗೊತ್ತಿಲ್ಲ, ಪೋಲಿಸರು ತನ್ನನ್ನುವಿಚಾರಿಸಿಲ್ಲ ತಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಪೋಲಿಸರು ತನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ಪಂಚನಾಮೆ ಕ್ರಮವನ್ನು ಜರುಗಿಸಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

15. ಚಾಸಾ.6 ರವರಾದ ತಿಪ್ಪೇಶಿ.ಎಸ್.ಇ ರವರು ದಾಳಿ ಕಾಲದಲ್ಲಿ ಭಾಗವಹಿಸಿದ ಪೋಲಿಸ್ ಪೇದೆಯಾಗಿದ್ದು, ಆ ಬಗ್ಗೆ ಪ್ರಾಸಾ-4 ಎಂಬುದಾಗಿ ಮೌಖಿಕ ಸಾಕ್ಷ್ಯ ನೀಡಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಘಟನೆ ದಿನ ಚಾಸಾ-1 ರವರು ಎನ್.ಜಿ.ಹಳ್ಳಿ ಗೇಟ್ ನ ಬಳಿ ಯಾರೋ ಇಬ್ಬರೂ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ತಿಳಿಸಿ

ಅವರ ಮೇಲೆ ದಾಳಿ ಮಾಡಬೇಕೆಂದು ತಿಳಿಸಿದ್ದು, ಸಂಜೆ **4:50** ಗಂಟೆಗೆ ಪಂಚರನ್ನು ಠಾಣೆಗೆ ಬರಮಾಡಿಕೊಂಡು ಚಾಸಾ.1 ರವರು ಅವರಿಗೆ ಸದರಿ ವಿಚಾರವನ್ನು ತಿಳಿಸಿದ್ದು ನಂತರ ನಾವುಗಳೆಲ್ಲರೂ ದಾಳಿ ಮಾಡಲು ಕೆಎ**.16** ಜಿ**-232** ರ ಠಾಣಾ ಜಿಪಿನಲ್ಲಿ ಸಂಜೆ 05 ಗಂಟೆಗೆ ಪೊಲೀಸ್ ಠಾಣೆಯನ್ನು ಎನ್.ಜಿ.ಹಳ್ಳಿ ಗೇಟ್ ಬಳಿ ಜೀಪನ್ನು ನಿಲ್ಲಿಸಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದ ಸ್ಥಳದ ಹತ್ತಿರ ಕಾಲ ನಡಿಗೆಯಲ್ಲಿ ನಡೆದುಕೊಂಡು 05:30 ಗಂಟೆಗೆ ಹೋಗಿ ಮರೆ ಮಾಚಿ ನಿಂತು ನೋಡಲಾಗಿ ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ರಟ್ಟಿನ ಬಾಕ್ಸಿನಲ್ಲಿ ಮಧ್ಯವನ್ನು ಇಟ್ಟು ಕೊಂಡು ಅಕ್ರಮವಾಗಿ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು, ನಾವುಗಳು ಅವರನ್ನು ಹಿಡಿಯಲು ಮುಂದಾದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ರಟ್ಟಿನ ಬಾಕ್ಸಗಳನ್ನು ಅಲ್ಲಿಯೇ ಬಿಟ್ಟು ಜೋಳದ ಹೊಲಕ್ಕೆ ಓಡಿಹೋಗಿ ತಪ್ಪಿಸಿಕೊಂಡಿರುತ್ತಾರೆ, ನಂತರ ನಾವುಗಳು ಅವರು ಮಧ್ಯವನ್ನು ಇಟ್ಟು ಕೊಂಡು ಮಾರಾಟ ಮಾಡುತ್ತಿದ್ದ ಸ್ಥಳಕ್ಕೆ ಹಿಂದಿರುಗಿ ಬಂದು ಅಲ್ಲಿಯೇ ನಿಂತಿದ್ದ ಚಾಸಾ-4 ಮತ್ತು 5 ರವರನ್ನು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದವರ ಹೆಸರು ವಿಳಾಸವನ್ನು ಕೇಳಲಾಗಿ, ರಾಮಾಂಜನೇಯ ತಂದೆ ಕೃಷ್ಣಪ್ಪ, ಹೊಳಲ್ಕೆರೆ ಟೌನ್ ಮತ್ತು ಸಾಕಮ್ಮ ಗಂಡ ಚಂದ್ರಪ್ಪ, ಗಂಗಸಮುದ್ರ ಗ್ರಾಮ ಎಂದು ತಿಳಿಸಿರುತ್ತಾರೆ ಎಂದು ಸದರಿ ಸ್ಥಳದಲ್ಲಿ ಮು.ಮಾ-01 ಮತ್ತು 2 ನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಸಾಕ್ಷವನ್ನು ನುಡಿದಿರುತ್ತಾರೆ.

16. ಚಾಸಾ.7 ರವರಾದ ಕೃಷ್ಣಪ್ಪ ಲಕ್ಕಿ ಕೋನಿ ರವರು ಪೋಲಿಸ್ ಪೇದೆಯಾಗಿದ್ದು ಆ ಬಗ್ಗೆ ಪ್ರಾಸಾ-5 ಎಂಬುದಾಗಿ ಮೌಖಿಕ ಸಾಕ್ಷ್ಯ ನೀಡಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ನಾವು, ಪಂಚರು ಹಾಗೂ ಇತರೆ ಪೋಲಿಸ್ ಅಧಿಕಾರಿಗಳೊಂದಿಗೆ ಚಾ.ಸಾಃ-1 ರವರ ಜೊತೆ ಸುಮಾರು ಸಂಜೆ 5.00 ಕ್ಕೆ ಇಲಾಖಾ ಜೀಪಿನಲ್ಲಿ ಠಾಣೆಯಿಂದ ಹೊರಟು ಘಟನಾ ಸ್ಥಳಕ್ಕೆ 5.30 ಗಂಟೆಗೆ ಎನ್.ಜಿ.ಹಳ್ಳಿ ಗೇಟ್ ಗೆ ಹೋಗಿ, ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ ಎಲ್ಲಾ ಕೆಳಗೆ ಇಳಿದು ನಡೆದುಕೊಂಡು ಘಟನಾ ಸ್ಥಳಕ್ಕೆ ಹೋಗಿ ಮರೆಮಾಚಿ ನಿಂತು ನೋಡಲಾಗಿ ಆರೋಪಿತರು ಎರಡು ರಟ್ಟಿನ ಬಾಕ್ಸ್‌ಗಳನ್ನು ಇಟ್ಟು ಕೊಂಡು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು,

ಆರೋಪಿತರು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಿ ಹೋಗಿದ್ದು, ನಾವು ಅವರನ್ನು ಬೆನ್ನತ್ತಿ ಹಿಡಿಯಲು ಮುಂದಾದಾಗ ಅಲ್ಲಿಯೇ ಇದ್ದ ಜೋಳದ ಹೊಲದಲ್ಲಿ ಹೋಗಿ ತಪ್ಪಿಸಿಕೊಂಡಿರುತ್ತಾರೆ ನಂತರ ನಾವು ಘಟನಾ ಸ್ಥಳಕ್ಕೆ ಬಂದು ಅಲ್ಲಿಯೇ ನಿಂತಿದ್ದ ಚಾಸಾ-5 ರವರನ್ನು ಓಡಿಹೋದ ಆರೋಪಿತರ ಹೆಸರು ಮತ್ತು ವಿಳಾಸ ಕೇಳಲಾಗಿ ರಾಮಾಂಜನೇಯ ಮತ್ತು ಸಾಕಮ್ಮ ಗಂಡ ಚಂದ್ರಪ್ಪ ಎಂದು ತಿಳಿಸಿದ್ದು, ಅವರನ್ನು ವಿಚಾರಿಸಲಾಗಿ ಆರೋಪಿತರು ಸರ್ಕಾರದ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಮಧ್ಯ ಮಾರಾಟ ಮಾಡುವುದನ್ನು ತಿಳಿಸಿದ ಮೇರೆಗೆ ನಂತರ ನಾವುಗಳು ಸ್ಥಳದಲ್ಲಿದ್ದ ರಟ್ಟಿನ ಬಾಕ್ಸ್ ಗಳನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದರಲ್ಲಿ 180 ಎಂ ಎಲ್ ನ 39 ಓಲ್ಡ್ ತವರನ್ ವಿಸ್ಕಿ ಪೌಚುಗಳಿದ್ದು ಎಂದು ಮಾಲು ಮತ್ತು ಆರೋಪಿತರನ್ನು ಪುನಃ ನೋಡಿದರೆ ಗುರುತಿಸುತ್ತೇನೆಂದು ಎಂದು ಸಾಕ್ಷವನ್ನು ನುಡಿದಿರುತ್ತಾರೆ.

17. ಅಭಿಯೋಜನೆ ವಕೀಲರು ತಮ್ಮ ವಾದವನ್ನು ಮಂಡಿಸಿದ್ದು ತಮ್ಮ ವಾದ ಮಂಡನೆ ಕಾಲದಲ್ಲಿ ಆರೋಪಿಯು ಕರ್ನಾಟಕ ಅಬಕಾರಿ ಕಾಯಿದೆ ಕಲಂ.32 ಮತ್ತು 34 ಉಲ್ಲಂಘನೆಯಾಗಿದ್ದು ಆರೋಪಿತಳ ಶಿಕ್ಷಾರ್ಹ ಅಪರಾಧ ಎಸೆಗಿರುವುದರಿಂದ ಅಭಿಯೋಜನೆಯು ಪ್ರಾಸಾ.1 ರಿಂದ ಪ್ರಾಸಾ.7 ಸಾಕ್ಷಿದಾರರುಗಳನ್ನು ವಿಚಾರಣೆಗೆ ಒಳಪಡಿಸಿದ್ದು ಅಭಿಯೋಜನೆ ಪ್ರಕರಣಕ್ಕೆ ಪೂರಕ ಉತ್ತರ ನೀಡಿರುತ್ತಾರೆ ಹಾಗೂ ನಿಪಿ.1 ರಿಂದ ನಿಪಿ.6 ದಾಖಲೆಗಳ ಪುಷ್ಠೀಕರಿಸುವಂತೆ ಉತ್ತರ ನೀಡಿದ್ದು ಮು.ಮಾ-01 ಮತ್ತು 2 ನ್ನು ಗುರುತಿಸಿಕೊಳ್ಳಲಾಗಿರುತ್ತದೆ, ಚಾಸಾ-1, 4 ಮತ್ತು 5 ರವರು ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪ ರುಜುವಾತುವಾಗಿರುವುದರಿಂದ 2 ನೇ ಆರೋಪಿತರನ್ನು ಸೂಕ್ತ ರೀತಿಯಲ್ಲಿ ಶಿಕ್ಷಿಸುವಂತೆ ಪ್ರಾರ್ಥಿಸಿರುತ್ತಾರೆ.

18. 2 ನೇ ಆರೋಪಿತಳ ಪರ ವಕೀಲರು ಅಭಿಯೋಜನೆಯ ವಾದಮಂಡನೆಯ ವಿರುದ್ಧವಾಗಿ ಆರೋಪಿಯು ಅಭಿಯೋಜನೆಯು ಆರೋಪಿಸಿರುವಂತ ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಅಬಕಾರಿ ಪ್ರಕರಣಗಳ ಅಂಕಿ-ಅಂಶಗಳಿಗೋಸ್ಕರ ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಕಥೆಯನ್ನು ಸೃಷ್ಟಿಸಿ 2 ನೇಆರೋಪಿಯನ್ನು

ಬಲಿಪಶುವನ್ನಾಗಿ ಮಾಡಿ ಪ್ರಕರಣದಲ್ಲಿ ಸಿಲುಕಿಸಿದ್ದಾರೆ, ಮುಂದುವರೆದು ಆರೋಪಿಯ ದೈಹಿಕ ಚಹರೆ, ಆಕೆಯು ಧರಿಸಿದ್ದ ಬಟ್ಟೆ ಹಾಗೂ ಸ್ಥಳದಲ್ಲಿ ಸದರಿ ವಶಪಡಿಸಿಕೊಂಡ ಮಧ್ಯವನ್ನು ಎಲ್ಲಿಂದ ತರಲಾಗಿತ್ತು ಎಂದು ತನಿಖಾಧಿಕಾರಿ ಅನ್ವೇಷಣೆ ಮಾಡಿರುವುದಿಲ್ಲ ಹಾಗೂ 2 ನೇ ಆರೋಪಿತಳಿಂದ ಆರೋಪ ಪಟ್ಟಿಯಲ್ಲಿ ಆರೋಪಿಸಿರುವಂತೆ ಯಾವುದೇ ಮದ್ಯವನ್ನು ವಶಪಡಿಸಿಕೊಂಡಿರುವುದಿಲ್ಲ ಹಾಗೂ ಸ್ಥಳ ಮಹಜರ್/ಅಮಾನತು ಮಹಜರ್ ಸಾಕ್ಷಿಗಳು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿಗಳಗಿದ್ದು ಸ್ವತಂತ್ರ ಸಾಕ್ಷಿಗಳಿಂದ ಅಭಿಯೋಜನೆಯ ಪ್ರಕರಣವನ್ನು ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದು, ಆರೋಪಿತಳ ವಿರುದ್ದ ಆರೋಪವನ್ನು ಸಾಬೀತುಪಡಿಸುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿದ್ದು ಆರೋಪಿತಳನ್ನು ನಿರ್ದೋಷಿಯೆಂದು ಪರಿಗಣಿಸಿ ಪ್ರಕರಣದಿಂದ ದೋಷಮುಕ್ತನನ್ನಾಗಿ ಖುಲಾಸೆಗೊಳಿಸಬೇಕೆಂದು ವಾದ ಮಂಡಿಸಿ ಪಾರ್ಥಿಸಿರುತ್ತಾರೆ.

19. ಈ ಮೇಲ್ಕಂಡ ಅಭಿಯೋಜನೆಯ ಪ್ರಕರಣದಲ್ಲಿ ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಮೌಖಿಕ ಹೇಳಿಕೆ ಹಾಗೂ ಪ್ರಾಸಾ.1 ರಿಂದ ಪ್ರಾಸಾ.7 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.1 ರಿಂದ ನಿಪಿ.6 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿದ್ದು ಮತ್ತು ಮು.ಮಾ.1 ಮತ್ತು ಮು.ಮಾ.2 ಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ದಾಖಲೆಗಳಾದ ನಿಪಿ-1 ಸ್ಥಳ ಮಹಜರ್, ನಿಪಿ-2 ವರದಿ, ನಿಪಿ-3 ಚಾಸಾ-2 ರವರ ಹೇಳಿಕೆ, ನಿಪಿ-4 ಚಾಸಾ-3 ರವರ ಹೇಳಿಕೆ, ನಿಪಿ-5 ಚಾಸಾ-5 ರವರ ಹೇಳಿಕೆ ನಿಪಿ-6 ಚಾಸಾ-4 ರವರ ಹೇಳಿಕೆಗಳಾಗಿರುತ್ತವೆ. ಮೇಲ್ಕಂಡ ಅಭಿಯೋಜನೆಯವರು ಗುರುತಿಸಿಕೊಂಡಿರುವ ದಾಖಲೆಗಳಲ್ಲಿ ನಿಪಿ-2 ರಿಂದ ನಿಪಿ-6 ಸಾಕ್ಷಿದಾರರು ನಿರಾಕರಿಸಿದ ಹೇಳಿಕೆಗಳಾಗಿದ್ದು ಆರೋಪಿತಳ ಮೇಲಿನ ಆರೋಪ ರುಜುವಾತಿಗೆ ಪೂರಕವಾಗಿರುವುದಿಲ್ಲ,

20. ಈ ಮೇಲ್ಕಂಡ ಅಭಿಯೋಜನೆಯು ಸಾಕ್ಷಿಗಳ ವಿಚಾರಣೆಗಳನ್ನು ಗಮನಿಸಿದ್ದಾಗ್ಗೆ ಅಭಿಯೋಜನೆಯ ವಿಚಾರಣೆಯ ಮೌಖಿಕ ಹೇಳಿಕೆ ಮತ್ತು ಅಭಿಯೋಜನೆಯು ಗುರುತಿಸಿಕೊಂಡಿರುವ ದಾಖಲಾತಿ ನಿಪಿ.1 ಮತ್ತು ನಿಪಿ.2 ನ್ನು ಕೂಲಂಕುಷವಾಗಿ

ಗಮನಿಸಿದ್ದಾಗ್ಗ ಅಭಿಯೋಜನೆಯು ಆರೋಪಿತಳ ಮೇಲೆ ದಿ.08/11/2012 ರಂದು ಸಂಜೆ 5-30 ರ ವೇಳೆ ಎನ್.ಜಿ.ಹಳ್ಳಿ ಗೇಟ್ ಬಳಿ ಮು.ಮಾ.01 ರಂತೆ ಅಕ್ರಮವಾಗಿ ಮದ್ಯದ ವಸ್ತುಗಳನ್ನು ಇಟ್ಟುಕೊಂಡು 1 ನೇ ಆರೋಪಿಯ ಜೊತೆ ಮಾರಾಟ ಮಾಡುತ್ತಿದ್ದರು ಎಂದು ದೋ.ಸಾಕ್ಷಿ-1 ರವರು ದೋ.ಸಾಕ್ಷಿ-2 ಮತ್ತು 3 ರವರನ್ನು ಪಂಚರನ್ನಾಗಿಸಿಕೊಂಡು ಚಾಸಾ-6 ಮತ್ತು 7 ಪೋಲಿಸ್ ಪೇದೆ ಸಹಾಯದಿಂದ ದಾಳಿ ಮಾಡಿ ಮು.ಮಾ.1 ಮತ್ತು 2 ನ್ನು ವಶಪಡಿಸಿಕೊಂಡಿರುತ್ತಾರೆಂದು ಆರೋಪಿಸಲಾಗಿರುತ್ತದೆ. ಸದರಿ ಆರೋಪ ರುಜುವಾತು ಹೊಣೆಗಾರಿಕೆಯು ಅಭಿಯೋಜನೆಯ ಮೇಲೆ ಇರುತ್ತದೆ ದೋ ಸಾಕ್ಷಿ-1 ರವರು ತಮ್ಮ ಮುಖ್ಯ ವಿಚಾರಣೆ ವೇಳೆ ಚಾಸಾ-2 ಮತ್ತು 3 ರವರ ಸಮಕ್ಷಮ ದಾಳಿ ಮಾಡಿದ್ದು, ದಾಳಿ ವೇಳೆ ಒಬ್ಬ ಹೆಂಗಸು ಮತ್ತು ಗಂಡಸು ರಟ್ಟಿನ ಬಾಕ್ಸ್ ನ್ನು ಸ್ಥಳದಲ್ಲಿ ಬಿಟ್ಟು ಓಡಿ ಹೋಗಿರುತ್ತಾರೆಂದು ಮು.ಮಾ1 ರಂತೆ ಮದ್ಯದ ವಸ್ತುಗಳನ್ನು ದೊರೆತಿರುತ್ತವೆಂದು ಚಾಸಾ-2 ಮತ್ತು 3 ರವರ ಸಮಕ್ಷಮ ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ ಎಂದು ಹೇಳಿಕೆ ನೀಡಿದ್ದು, ಚಾಸಾ-2 ಮತ್ತು 3 ರವರು ಪ್ರಾಸಾ-2 ಮತ್ತು 3 ರಂತೆ ಅಭಿಯೋಜನೆ ವಿಚಾರಣೆಗೆ ಒಳಪಡಿಸಿದ್ದು ನಿಪಿ 1 ಕ್ಕೆ ಸ್ಥಳ ಮಹಜರ್/ ಅಮಾನತ್ತು ಮಹಜರ್ ಗೆ ಪ್ರಾಸಾ-2 ರವರು ಹೊಳಲ್ಕೆರೆ ಬಸ್ ನಿಲ್ದಾಣದಲ್ಲಿ ಸಹಿ ಮಾಡಿರುತ್ತೇವೆಂದು ಪ್ರಾಸಾ-3 ರವರು ಎನ್. ಜಿ ಹಳ್ಳಿ ಬಸ್ ನಿಲ್ದಾಣದಲ್ಲಿ ಸಹಿ ಮಾಡಿರುತ್ತೇವೆಂದು ಹೇಳಿಕೆ ನೀಡಿದ್ದು, ಸದರಿ ಇಬ್ಬರೂ ಮಹಜರ್ ಸಾಕ್ಷಿದಾರರು ನಿಪಿ-1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಓದಿ ಹೇಳಿಕೆ ಬೇರೆ ಯಾರು ಸಹಿ ಮಾಡಿರುತ್ತಾರೆ ಗೊತ್ತಿಲ್ಲ, ಪೋಲಿಸರು ತಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ಮದ್ಯದ ಪೌಚುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದು ಹೇಳಿಕೆ ನೀಡಿದ್ದು, ನಿಪಿ-1 ಸ್ಥಳ ಮಹಜರ್/ಅಮಾನತ್ತು ಮಹಜರ್ ಪ್ರಾಸಾ-2 ಮತ್ತು 3 ರವರ ಮೂಲಕ ರುಜುವಾತು ಆಗಿರುವುದಿಲ್ಲ. ಆದ್ದರಿಂದ ಪ್ರಾಸಾ-2 ಮತ್ತು 3 ರವರ ವಿಚಾರಣೆಗೆ ಅಭಿಯೋಜನೆಯ ಆರೋಪಕ್ಕೆ ಪೂರಕವಾಗಿರುವುದಿಲ್ಲ ಆದೇ ರೀತಿ ನಿಪಿ-1 ಈ ಸಾಕ್ಷಿಗಳ ಮೂಲಕ ರುಜುವಾತು ಆಗಿರುವುದಿಲ್ಲ ಹಾಗೂ ಮದ್ಯದ ವಸ್ತುಗಳು ಅಮಾನತ್ತು ಮಾಡಿಕೊಂಡಿರುವ ಬಗ್ಗೆ ಅನುಮಾನ ವ್ಯಕ್ತವಾಗಿದ್ದು ಅನುಮಾನದ ಅನುಕೂಲತೆ ಆರೋಪಿತಳ ಪರವಾಗಿ ಪರಿಗಣಿಸುವುದು ಸೂಕ್ತವಾಗಿರುತ್ತದೆ.

21. ಪ್ರಾಸಾ-1 ರವರು ತಮ್ಮ ವಿಚಾರಣೆ ವೇಳೆ ಸ್ಥಳದಲ್ಲಿದ್ದ ಒಬ್ಬ ಹೆಂಗಸು ಮತ್ತು ಗಂಡಸು ಓಡಿ ಹೋಗಿರುತ್ತಾರೆಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಸದರಿಯವರ ದೈಹಿಕ ಚಹರೆಯನ್ನು ಚಾಸಾ-1 ರವರ ವರದಿಯಲ್ಲಾಗಲೀ ಅಮಾನತ್ತು ಮಹಜರ್ ನಲ್ಲಾಗಲೀ ನಮೂದಿಸಿರುವುದಿಲ್ಲ ಅದೇ ರೀತಿ ಸದರಿ ಓಡಿ ಹೋದ ಗಂಡಸು ಮತ್ತು ಹೆಂಗಸಿನ ಬಗ್ಗೆ ಚಾಸಾ-4 ಮತ್ತು 5 ರವರು ಸ್ಥಳದಲ್ಲಿ ಮಾಹಿತಿ ನೀಡಿರುತ್ತಾರೆಂದು ಹೇಳಿದ್ದು ಸದರಿ ಚಾಸಾ-4 ಮತ್ತು 5 ರವರನ್ನು ಪ್ರಾಸಾ-6 ಮತ್ತು 7 ರಂತೆ ವಿಚಾರಣೆಗೆ ಒಳಪಡಿಸಿದ್ದು, ತಮ್ಮ ವಿಚಾರಣೆ ವೇಳೆ ಪ್ರಾಸಾ-6 ಮತ್ತು 7 ರವರು ಚಾಸಾ-2 ಮತ್ತು 3 ಗೊತ್ತಿಲ್ಲ ಪ್ರಕರಣದ ವಿಚಾರಗಳಾವುವು ತಮಗೆ ಗೊತ್ತಿಲ್ಲ ಪೋಲಿಸರು ತಮ್ಮನ್ನು ವಿಚರಾರಿಸಿರುವುದಿಲ್ಲ ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಪೋಲಿಸರು ಪಂಚನಾಮೆ ಕ್ರಮ ಜರುಗಿಸಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದು ಹೇಳಿಕೆ ನೀಡಿದ್ದು ದಾಳಿ ವೇಳೆ ಚಾಸಾ-4 ಮತ್ತು 5 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಆರೋಪಿತರ ಹೆಸರು ಮತ್ತು ವಿಳಾಸ ನೀಡಿದ ವ್ಯಕ್ತಿಗಳಾಗಿದ್ದು ಸಂಪೂರ್ಣ ಪ್ರತಿಕೂಲ ಸಾಕ್ಷಿದಾರರಾಗಿದ್ದರಿಂದ ಆರೋಪಿತರ ಗುರುತಿಸುವಿಕೆಯ ಬಗ್ಗೆ ಹಾಗೂ ಅಮಾನತ್ತು ಮಹಜರ್ ಮತ್ತು ಮದ್ಯದ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವ ಬಗ್ಗೆ ಪೂರಕ ಪುರಾವೆಗಳಿರುವುದಿಲ್ಲ, ಪ್ರಾಸಾ-4 ಮತ್ತು 5 ರವರ ಮೂಲಕ ಆರೋಪಿತಳ ಗುರುತಿಸುವಿಕೆ ರುಜುವಾತುವಾಗಿರುವುದಿಲ್ಲ.

22. ಪ್ರಾಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ಪ್ರಾಸಾ-2 ರವರು ನೋಟಿಸ್ ಕೊಟ್ಟಿಲ್ಲ ಮೌಖಿಕವಾಗಿ ಹೇಳಿರುತ್ತೇವೆ, ಆರೋಪಿತರು ಸಾರ್ವಜನಿಕರಿಗೆ ಓಟಿ ವಿಸ್ಕಿ ಮಾರಾಟ ಮಾಡುತ್ತಿದ್ದರು ಸಾರ್ವಜನಿಕರ ಹೆಸರು ಹೇಳಲಾಗುವುದಿಲ್ಲ, ಸಾರ್ವಜನಿಕರು ವಿಚಾರಣೆ ಮಾಡಲು ಸಿಗಲಿಲ್ಲ ಪರಾರಿಯಾಗಿರುತ್ತಾರೆ, ಮು.ಮಾ-01 ರ ಕ್ರಮ ಸಂಖ್ಯೆ ತಯಾರಾದ ದಿನಾಂಕ ಬ್ಯಾಚ್ ನಂಬರ್ ಹೇಳಲಾಗುವುದಿಲ್ಲ, ನಿಪಿ-1 ರ ಮು.ಮಾ-01 ರ ಕ್ರಮ ಸಂಖ್ಯೆ ತಯಾರಾದ ದಿನಾಂಕ ಬ್ಯಾಚ್ ನಂಬರ್ ನಮೂದಿಸಿಲ್ಲ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಈ ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ್ಗೆ

ಅಮಾನತ್ತುಪಡಿಸಿಕೊಂಡ ಮದ್ಯ ವಸ್ತುಗಳ ತಯಾರದ ದಿನಾಂಕ, ಕ್ರಮ ಸಂಖ್ಯೆ ನಮೂದಿಸಿರುವುದಿಲ್ಲ ಹಾಗೂ ಪಂಚರಿಗೆ ನೋಟಿಸ್ ಜಾರಿ ಮಾಡಿರುವುದಿಲ್ಲ, ಸ್ಥಳದಲ್ಲಿದ್ದ ಸಾರ್ವಜನಿಕರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ ಓಡಿ ಹೋದ ವ್ಯಕ್ತಿಗಳನ್ನು ಹಿಡಿಯಲು ಪ್ರಯತ್ನಿಸಿರುವುದಿಲ್ಲ, ಆರೋಪಿತರ ವಶದಿಂದ ಮದ್ಯದ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಲ್ಲಾ ಅಂಶಗಳನ್ನು ಗಮನಿಸಿದಾಗ್ಗೆ ಆರೋಪಿತಳ ವಶದಲ್ಲಿ ಮು.ಮಾ-01 ರಂತೆ ಮದ್ಯದ ವಸ್ತುಗಳು ಇದ್ದವು ಎಂಬ ಬಗ್ಗೆ ರುಜುವಾತುವಾಗಿರುವುದಿಲ್ಲ, ಆರೋಪಿತಳು ಮಹಿಳೆಯಾಗಿದ್ದು ಓಡಿ ಹೋದಳು ಎಂದು ಹೇಳಿದ್ದು ತರಬೇತಿಯುಳ್ಳ ಪೋಲಿಸ್ ಅಧಿಕಾರಿಗಳು ಬೆನ್ನಟ್ಟಿ ಹಿಡಿಯದೇ ಇರುವುದು ಹಲವು ಅನುಮಾನಗಳಿಗೆ ಕಾರಣವಾಗಿರುತ್ತದೆ, ಆರೋಪಿತಳ ಗುರುತಿಸುವಿಕೆಗೆ ಸಂಬಂಧಿಸಿದಂತೆ ಚಾಸಾ-4 ಮತ್ತು 5 ರವರು ಪ್ರತಿಕೂಲ ಸಾಕ್ಷಿಗಳಾಗಿದ್ದು ಆರೋಪಿತಳ ವಶದಲ್ಲಿ ಮದ್ಯ ವಸ್ತುಗಳು ಇದ್ದವು ಮಾರಾಟ ಮಾಡುತ್ತಿದ್ದರು ಎಂಬ ಬಗ್ಗೆ ರುಜುವಾತುವಾಗಿರುವುದಿಲ್ಲ.

23. ಈ ಪ್ರಕರಣದಲ್ಲಿ ಪ್ರಾಸಾ-4 ರವರು ಪ್ರಾಸಾ-1 ರವರ ಜೊತೆ ದಾಳಿ ಸಮಯದಲ್ಲಿ ಭಾಗವಹಿಸಿದ ಪೋಲಿಸ್ ಪೇದೆಯಾಗಿದ್ದು, ದಾಳಿಯ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯವನ್ನು ನುಡಿದಿದ್ದು, ತಮ್ಮ ಪಾಟೀ ಸವಾಲಿನಲ್ಲಿ ದಾಳಿ ಕಾಲದಲ್ಲಿ ಪಂಚರನ್ನು ಯಾರು ಎಲ್ಲಿಂದ ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಎನ್.ಜಿ ಹಳ್ಳಿ ಗೇಟ್ ಬಳಿ ಯಾವ ಸ್ಥಳದಲ್ಲಿ ನಾವು ನಿಖರವಾಗಿ ಭೇಟಿ ನೀಡಿರುತ್ತೇವೆ ಎಂದು ಹೇಳಲಾಗುವುದಿಲ್ಲ, ಮರೆ ಮಾಚಿ ನಿಂತು ನೋಡಿದಾಗ ಸ್ಥಳದ ಚೆಕ್ಕು ಬಂಧಿ ಹೇಳಲಾಗುವುದಿಲ್ಲ, ನಾವು ಅಮಾನುತ್ತಪಡಿಸಿಕೊಂಡ ಮದ್ಯದ ಪೌಚ್‌ಗಳ ಮೇಲೆ ತಯಾರಾದ ದಿನಾಂಕ ಬ್ಯಾಚ್ ನಂಬರ್ ಗಳನ್ನು ನಮೂದಿಸಿಕೊಂಡಿರುವುದಿಲ್ಲ ನಿಪಿ-1 ನ್ನು ಯಾರು ಬರೆದಿರುತ್ತಾರೆ ಎಂದು ಹೇಳಲಾಗುವುದಿಲ್ಲ ಈ ಮೇಲ್ಕಂಡ ಅಂಶಗಳನ್ನು ಗಮನಿಸಿದ್ದಾಗ್ಗೆ ಒಂದು ವೇಳೆ ದಾಳಿಯಲ್ಲಿ ಪೋಲಿಸ್ ಅಧಿಕಾರಿ ಭಾಗಿಯಾಗಿದ್ದ ಪಕ್ಷದಲ್ಲಿ ಪಂಚರು ಎಲ್ಲಿಂದ ಬಂದರು ಹಾಗೂ ತಾನು ನಿಂತಿದ್ದ ಸ್ಥಳದ ಚೆಕ್ಕು ಬಂದಿ ನಿಖರವಾಗಿ ಹೇಳುತ್ತಿದ್ದರು, ಆದ್ದರಿಂದ ಈ ಸಾಕ್ಷಿಯು ದಾಳಿಯಲ್ಲಿ ಭಾಗವಹಿಸಿರುವ ಬಗ್ಗೆ ಅನುಮಾನ ವ್ಯಕ್ತವಾಗಿದ್ದು ಅನುಮಾನದ ಅನುಕೂಲತೆ ಆರೋಪಿತಳ ಪರವಾಗಿ

ಪರಿಗಣಿಸುವುದು ಸೂಕ್ತವಾಗಿರುತ್ತದೆ.

24. ಪ್ರಾಸಾ-5 ರವರು ಸಹ ಚಾಸಾ-1 ರವರ ಜೊತೆ ದಾಳಿಯಲ್ಲಿ ಭಾಗವಹಿಸಿದ್ದು ಪೋಲಿಸ್ ಅಧಿಕಾರಿಯಾಗಿದ್ದು, ದಾಳಿಯ ಬಗ್ಗೆ ತಮ್ಮ ಮುಖ್ಯ ವಿಚಾರಣೆಯ ವೇಳೆ ಸಾಕ್ಷಿಯನ್ನು ನುಡಿದಿರುತ್ತಾರೆ, ತಮ್ಮ ಪಾಟೀ ಸವಾಲಿನಲ್ಲಿ ಇವರು ಸಹಾ ಯಾರ ಮುಖಾಂತರ ಚಾಸಾ-1 ರವರು ಚಾಸಾ-2, 3 ರವರನ್ನು ಬರಮಾಡಿಕೊಂಡಿರುತ್ತಾರೆಂಬುದು ನಮಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ ದಾಳಿ ಸ್ಥಳವು ಸರ್ಕಲ್ ಎಂದು ಕರೆಯುತ್ತಾರೆಂದು ಒಪ್ಪಿಕೊಂಡಿದ್ದು, ಸದರಿ ರಸ್ತೆಯ ಎರಡು ಬದಿಗಳಲ್ಲಿ ಅಂಗಡಿಗಳು ಇರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ, ಈ ಅಂಶವನ್ನು ಗಮನಿಸಿದಾಗ್ಗೆ ದಾಳಿ ಸ್ಥಳವು ಹಲವು ಅಂಗಡಿ ಮುಗ್ಗಟ್ಟು ಇರುವುದರಿಂದ ಜನ ಇರುವ ಪ್ರದೇಶ ಎಂದು ಕಂಡುಬರುತ್ತದೆ, ಆದೇ ರೀತಿ ಮುಂದುವರೆದ ಪಾಟೀ ಸವಾಲಿನಲ್ಲಿ ನಾವು 3 ನಿಮಿಷಗಳ ಕಾಲ ಬೆನ್ನಟ್ಟಿ ಓಡಿ ಹೋಗಿರುತ್ತೇವೆ ಘಟನಾ ಸ್ಥಳದಲ್ಲಿ ಸುಮಾರು 15-20 ಸಾರ್ವಜನಿಕರು ಸೇರಿದ್ದರು ಅವರ ಹೆಸರುಗಳು ನನಗೆ ಗೊತ್ತಿಲ್ಲ ಎಂದು ಹೇಳಿಕೆಯನ್ನು ನೀಡಿದ್ದು, ಅಭಿಯೋಜನೆಯ ಪ್ರಕರಣದಂತೆ ಚಾಸಾ-2 ಮತ್ತು 3 ರವರನ್ನು ಹೊರತುಪಡಿಸಿ ಬೇರೆ ಯಾರು ಸಹ ಆರೋಪಿತರನ್ನು ಗುರುತಿಸಿರುವುದಿಲ್ಲ ದಾಳಿಯ ವೇಳೆ ಯಾವುದೇ ಪೋಲಿಸ್ ಅಧಿಕಾರಿ ಆರೋಪಿತರ ವಿಳಾಸ, ದೈಹಿಕ ಚಹರೆ ಹಾಗೂ ಆರೋಪಿತಳಿಗೆ ದಾಳಿ ಸ್ಥಳದಲ್ಲಿ ಅಂಗಡಿ ಇದ್ದ ಬಗ್ಗೆ ಹಾಗೂ ಇತರೆ ಅಗತ್ಯ ವಿವರಗಳನ್ನು ನೀಡಿರುವುದಿಲ್ಲ ಚಾಸಾ-2 ಮತ್ತು 3 ರವರು ಪ್ರಾಸಾ-2 ಮತ್ತು 3 ರಂತೆ ವಿಚಾರಣೆಗೊಳಪಟ್ಟಿದ್ದು, ಸ್ಥಳ ಮಹಜರ್/ ಅಮಾನತ್ತು ಮಹಜರ್ ಸಂಪೂರ್ಣ ಪ್ರತಿಕೂಲ ಸಾಕ್ಷಿದಾರರಾಗಿರುತ್ತಾರೆ, ಚಾಸಾ-4 ಮತ್ತು 5 ರವರು ಪ್ರಾಸಾ-6, 7 ರಂತೆ ವಿಚಾರಣಗೊಳಪಟ್ಟಿದ್ದು ಈ ಸಾಕ್ಷಿಗಳು ದಾಳಿಯ ವೇಳೆ ಆರೋಪಿತರನ್ನು ಗುರುತಿಸಿರುವ ಸಾಕ್ಷಿಗಳೆಂದು ವಿಚಾರಣೆಗೊಳಪಡಿಸಿದ್ದು, ವಿಚಾರಣಾ ವೇಳೆ 6 ಮತ್ತು 7 ರವರು ಸಂಪೂರ್ಣ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಆರೋಪಿತಳ ಗುರುತಿಸುವ ಬಗ್ಗೆ ಹೇಳಿಕೆಯನ್ನು ನೀಡಿರುವುದಿಲ್ಲ. ಆದ್ದರಿಂದ ಆರೋಪಿತಳ ಗುರುತಿಸುವಿಕೆ ಮತ್ತು ಅಮಾನತ್ತು ಪಂಚನಾಮೆಯನ್ನು ರುಜುವಾತುಪಡಿಸುವಲ್ಲಿ ಅಭಿಯೋಜನೆಯವರು ಸಂಪೂರ್ಣ ವಾಗಿ ವಿಫಲವಾಗಿರುತ್ತದೆಂದು ಮೇಲ್ಕಂಡ ಚರ್ಚೆಯಿಂದ ಕಂಡುಬಂದಿರುತ್ತದೆ.

25. ಈ ಪ್ರಕರಣದಲ್ಲಿ ಪ್ರಾಸಾ-2 ಮತ್ತು 3 ರವರು ಅಮಾನತ್ತು ಸಾಕ್ಷಿದಾರರಾಗಿದ್ದು ಪ್ರಾಸಾ-6, 7 ಆರೋಪಿತರನ್ನು ಸ್ಥಳದಲ್ಲಿ ಗುರುತಿಸಿದ ಹಾಗೂ ಆರೋಪಿತರ ಹೆಸರು ಮತ್ತು ವಿಳಾಸವನ್ನು ತಿಳಿಸಿದ ಸಾಕ್ಷಿದಾರರಾಗಿದ್ದು ಸಂಪೂರ್ಣ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಅಮಾನತ್ತು ಮತ್ತು ಆರೋಪಿತರನ್ನು ಗುರುತಿಸುವಿಕೆ ರುಜುವಾತುವಾಗಿರುವುದಿಲ್ಲ. ಪ್ರಾಸಾ-1 ದಾಳಿ ಮಾಡಿದ ಅಧಿಕಾರಿಯಾಗಿದ್ದು, ಪ್ರಾಸಾ-4 ಮತ್ತು 5 ರವರು ದಾಳಿಯಲ್ಲಿ ಭಾವಹಿಸಿ ಪ್ರಾಸಾ-1 ರವರಿಗೆ ಸಹಾಯ ಮಾಡಿದಂತ ಅಧಿಕಾರಿಗಳಾಗಿದ್ದು, ಪ್ರಾಸಾ-1, 4 ಮತ್ತು 5 ರವರು ಮೌಖಿಕ ಹೇಳಿಕೆಗಳಲ್ಲಿ ವ್ಯತಿರಿಕ್ತ ಕಂಡುಬಂದಿದ್ದು ಹಾಗೂ ಪಂಚರನ್ನು ಬರಮಾಡಿಕೊಂಡ ಬಗ್ಗೆ ದಾಳಿ ಸ್ಥಳದ ಬಗ್ಗೆ ಅಮಾನುತ್ತುಪಡಿಸಿಕೊಂಡ ಮಾಲುಗಳ ಬಗ್ಗೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಪ್ರಾಸಾ-1, 4 ಮತ್ತು 5 ರವರ ಮೌಖಿಕ ಹೇಳಿಕೆಗೆ ಪೂರಕವಾಗಿ ಯಾವುದೇ ಸ್ವತಂತ್ರ ಸಾಕ್ಷಿಗಳು ಹೇಳಿಕೆ ನೀಡದೇ ಇರುವುದರಿಂದ ಆರೋಪಿತಳ ಗುರುತುಸುವಿಕೆ ಮತ್ತು ಮದ್ಯದ ವಸ್ತುಗಳನ್ನು ಅಮಾನುತ್ತಪಡಿಸಿಕೊಂಡಿರುವ ಬಗ್ಗೆ ರುಜುವಾತು ಆಗದೇ ಇರುವುದರಿಂದ ಮು.01 ಮತ್ತು 2 ಆರೋಪಿತಳ ವಶದಲ್ಲಿದ್ದವು ಎಂದು ಮೇಲ್ಕಂಡ ಚರ್ಚೆಗಳಲ್ಲಿ ಕಂಡು ಬಂದತಹ ಅನುಮಾನಸ್ಪದ ಸಂದರ್ಭಗಳ ಹೊರತಾಗಿಯೂ 2 ನೇ ಆರೋಪಿತಳು ಆರೋಪ ಪಟ್ಟಿಯಲ್ಲಿ ಆರೋಪಿಸಿರುವಂತೆ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಪೂರಕ, ಸುಸಂಬದ್ದ ಮೌಖಿಕ ಮತ್ತು ಲಿಖಿತ ಸಾಕ್ಷ್ಯದಾರರನ್ನು ಹಾಜರುಪಡಿಸಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆಂದು ಕಂಡು ಬಂದಿರುತ್ತದೆ. ಆದ್ದರಿಂದ 2 ನೇ ಆರೋಪಿತಳ ವಿರುದ್ಧ ಅಭಿಯೋಜನೆಯವರು ಆರೋಪಿಸಲ್ಪಟ್ಟಂತೆ ಕಲಂ.32 ಮತ್ತು 34 ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ ಎಂದು ಈ ನ್ಯಾಯಾಲಯ ನಿರ್ಣಯಿಸುತ್ತದೆ. ಈ ಮೇಲ್ಕಂಡ ಎಲ್ಲಾ ಕಾರಣಗಳಿಗಾಗಿ ಈ ನ್ಯಾಯಾಲಯದ ಪರಿಗಣನೆಗೆ ಮೂಡಿ ಬಂದ ಅಂಶ **1** ಮತ್ತು **2** ಅನ್ನು ನಕಾರಾತ್ಮಕವಾಗಿ ಈ ನ್ಯಾಯಾಲಯವು ಉತ್ತರಿಸಿರುತ್ತದೆ.

**26. ಅಂಶ 3 ಃ-** ಈ ಮೇಲೆ ಚರ್ಚಿಸಲ್ಪಟ್ಟ ಕಾರಣಗಳಿಗಾಗಿ ಈ ಕೆಳಕಂಡಂತೆ

ನ್ಯಾಯಾಲಯವು ಆದೇಶಿಸಿರುತ್ತದೆ.

## ಃಃಆದೇಶಃಃ

ದಂ.ಪ್ರ.ಸಂ.ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ ಕಲಂ.32 ಮತ್ತು 34 ರಡಿಯಲ್ಲಿ ಮಾಡಲಾದ ಆರೋಪಗಳಿಗೆ 2 ನೇ ಆರೋಪಿತಳನ್ನು ನಿರ್ದೋಷಿ ಎಂದು ತೀರ್ಮಾನಿಸಿ ಖುಲಾಸೆಗೊಳಿಸಿರುತ್ತದೆ.

2 ನೇ ಆರೋಪಿತಳು ಮತ್ತು ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಗೊಳಿಸಲಾಗಿರುತ್ತದೆ.

2 ನೇ ಆರೋಪಿತಳು ಮತ್ತು ಜಾಮೀನುದಾರರು ಕಲಂ 437 (ಎ) ರಡಿಯಲ್ಲಿನ ಷರತ್ತುಗಳನ್ನು ಪೂರೈಸುವ ಸಲುವಾಗಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು 6 ತಿಂಗಳ ಕಾಲ ಚಾಲ್ತಿಯಡಲಾಗಿರುತ್ತದೆ.

2 ನೇ ಆರೋಪಿತಳು ಇಂದಿನಿಂದ ಸ್ವತಂತ್ರರಿರುತ್ತಾಳೆ.

ಅಬಕಾರಿ ಅಧಿಕಾರಿಗಳು ವಶಪಡಿಸಿಕೊಂಡು ಮಾಲುಪಟ್ಟಿ ಸಂಖ್ಯೆ 188/2012 ದಿ.08/11/2012 ರಂದು ನಮೂದಿಸಿ ನ್ಯಾಯಾಲಯದ ಮಾಲು ಪಟ್ಟಿ ಸಂಖ್ಯೆ 76/2019 ರಂತೆ ನ್ಯಾಯಾಲಯದ ವಶಕ್ಕೆ ನೀಡಿ ವಿಚಾರಣೆ ವೇಳೆ ಮುದ್ದೆ ಮಾಲು. (1) 180 ಎಂ.ಎಲ್.ನ 39 ಓಲ್ಡ್ ಟವರಿನ್ ವಿಸ್ಕಿ ಪ್ರಷರ್ ಪೇಪರ್ ಪೌಚುಗಳುನ್ನು ಹಾಗೂ ಮು.ಮಾ.(2) ಒಂದು ರಟ್ಟಿನ ಬಾಕ್ಸ್ ಗಳು ಮೂಲ ಪ್ರಕರಣದಿಂದ ಬೇರ್ಪಟ್ಟ ಪ್ರಕರಣ ಸಂಖ್ಯೆ 90/2026 ಪ್ರಕರಣದ ವಿಚಾರಣೆಗೆ ಅವಶ್ಯಕವಾಗಿದ್ದು, ಮೂಲ ಪ್ರಕರಣದ ವಿಚಾರಣೆಗೆ ಮು.ಮಾ.1 ಮತ್ತು 2 ನ್ನು ಸುರಕ್ಷಿತವಾಗಿಸಲು ಆದೇಶಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚಿಸಿ, ನಂತರ ನಾನು ಅದನ್ನು ಓದಿ ತಪ್ಪುಗಳನ್ನು ತಿದ್ದಿ ನಂತರ ಈ ದಿನ ಅಂದರೆ ದಿನಾಂಕ 16 ನೇ ಜುಲೈ ಮಾಹೆ 2026 ನೇ ಇಸವಿಯಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ).

(ಹನುಮಂತರಾಯಪ್ಪ.ಬಿ.ಆರ್)
ಅಪರ ಸಿವಿಲ್ ನ್ಯಾಯಾಧೀಶರು
ಪ್ರ.ದ.ನ್ಯಾ.ದಂಡಾಧಿಕಾರಿರವರು, ಹೊಳಲ್ಕೆರೆ

ಃ ಅನುಬಂಧ ಃ

ಅಭಿಯೋಜನ ಪಕ್ಷದ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಪಟ್ಟಿಃ

| | | |
|---|---|---|
| ಪ್ರಾಸಾ.1/ಚಾಸಾ-1 | ಃ | ಗಿರೀಶ.ಪಿ |
| ಪ್ರಾಸಾ.2 /ಚಾಸಾ-2 | ಃ | ಅಂಜಿನಪ್ಪ |
| ಪ್ರಾಸಾ.3/ಚಾಸಾ-3 | ಃ | ಬಿ.ಟಿ.ಮಹಂತೇಶ್ |
| ಪ್ರಾಸಾ.4 /ಚಾಸಾ-6 | ಃ | ತಿಪ್ಪೇಶಿ ಎಸ್.ಇ |
| ಪ್ರಾಸಾ.5/ಚಾಸಾ-7 | ಃ | ಕೃಷ್ಣಪ್ಪ ಲಕ್ಕಿ ಕೋನಿ |
| ಪ್ರಾಸಾ.6/ಚಾಸಾ-5 | ಃ | ರಮೇಶ್ |
| ಪ್ರಾಸಾ.7/ಚಾಸಾ-4 | ಃ | ಲೋಕೇಶ್ |

ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿಃ

- ಇಲ್ಲಾ -

ಅಭಿಯೋಜನ ಪಕ್ಷದವರ ಪರ ನಿಶಾನಿಸಲಾದ ದಾಖಲಾತಿಗಳ ಪಟ್ಟಿಃ

| | | |
|---|---|---|
| ನಿಪಿ.1 | ಃ | ಸ್ಥಳ ಮಹಜರ್ |
| ನಿಪಿ.2 | ಃ | ದೂರು |
| ನಿಪಿ.3 | ಃ | ಪ್ರಾಸಾ-2 ರವರ ಹೇಳಿಕೆ |
| ನಿಪಿ.4 | ಃ | ಪ್ರಾಸಾ-3 ರವರ ಹೇಳಿಕೆ |
| ನಿಪಿ.5 | ಃ | ಪ್ರಾಸಾ-6 ರವರ ಹೇಳಿಕೆ |
| ನಿಪಿ.6 | ಃ | ಪ್ರಾಸಾ7 ರವರ ಹೇಳಿಕೆ |

ಆರೋಪಿ ಪರ ನಿಶಾನಿಸಲಾದ ದಾಖಲಾತಿಗಳ ಪಟ್ಟಿಃ

- ಇಲ್ಲಾ -

ಅಭಿಯೋಜನ ಪಕ್ಷದವರ ಪರ ನಿಶಾನಿಸಲಾದ ಮುದ್ದೆ ಮಾಲುಗಳ ಪಟ್ಟಿಃ

| | |
|---|---|
| ಮು.ಮಾ.1 | ಃ 180 ಎಂ.ಎಲ್.ನ 39 ಓಲ್ಡ್ ಟವೆರಿನ್ ವಿಸ್ಕಿ ಪೌಚುಗಳು |
| ಮು.ಮಾ.2 | ಃ ಒಂದು ರಟ್ ಬಾಕ್ಸ್ |

ಅಪರ ಸಿವಿಲ್ ನ್ಯಾಯಾಧೀಶರು
ಪ್ರ.ದ.ನ್ಯಾ.ದಂಡಾಧಿಕಾರಿರವರು, ಹೊಳಲ್ಕೆರೆ

HANUMANTHARAYAPPA B R
Digitally signed by HANUMANTHARAYAPPA B R
Date: 2026.07.18 12:59:14 +0530